ಸತ್ಯಸಂಧತೆ ಮತ್ತು ನಿಷ್ಕಾಪಟ್ಯ

ಒಬ್ಬ ದೊಡ್ಡ ಪಾಪಿ ಇದ್ದನು. ಎಲ್ಲ ರೀತಿಯ ಕೆಡುಕು ಅವನಲ್ಲಿತ್ತು. ಅವನಲ್ಲಿ ತಾನು ಕೆಟ್ಟವನಾಗಿದ್ದೇನೆ ಎಂಬ ಪ್ರಜ್ಞೆಯೂ ಇತ್ತು. ಅವನು ಆ ಎಲ್ಲ ಕೆಡುಕುಗಳನ್ನು ತೊರೆಯಲೂ ಪ್ರಯತ್ನಿಸುತ್ತಿದ್ದ. ಆದರೆ ಅದರಲ್ಲಿ ಅವನು ಸಫಲನಾಗುತ್ತಿರಲಿಲ್ಲ. ಅವನ ಈ ತುಡಿತವು ಓರ್ವ ವಿದ್ವಾಂಸನ ಬಳಿಗೆ ಕೊಂಡೊಯ್ಯಿತು. ವಿದ್ವಾಂಸರು ಆತನನ್ನು ಆದರದಿಂದ ಬರಮಾಡಿಕೊಂಡರು ಮತ್ತು ವಿಷಯವೇನೆಂದು ಕೇಳಿದರು. ಈ ಪಾಪಿಯು ತನ್ನೆಲ್ಲ ವಿಷಯವನ್ನು ಚಾಚೂ ತಪ್ಪದೆ ಹೇಳಿದನು ಮತ್ತು ಒಳ್ಳೆಯವನಾಗಬೇಕೆಂಬ ಆಗ್ರಹವನ್ನೂ ತಿಳಿಸಿದನು. ಆಗ ವಿದ್ವಾಂಸರು, "ನೀನು ಸುಳ್ಳು ಹೇಳುವುದನ್ನು ಬಿಟ್ಟು ಬಿಡು ಮತ್ತು ಎಂತಹ ಸಂದರ್ಭದಲ್ಲೂ ಸತ್ಯವನ್ನೇ ನುಡಿಯಬೇಕು" ಎಂದು ಉಪದೇಶಿಸಿದರು. ಆ ವ್ಯಕ್ತಿಗೆ ಬಹಳ ಆಶ್ಚರ್ಯವಾಯಿತು. ನಾನು ಇಷ್ಟೆಲ್ಲ ಪಾಪಕಾರ್ಯಗಳನ್ನು ಎಸಗಿದ್ದೇನೆ, ಈ ವಿದ್ವಾಂಸರು ಕೇವಲ ಸುಳ್ಳು ಹೇಳಬೇಡ ಎಂದಷ್ಟೇ ಹೇಳಿ ಬಿಟ್ಟರಲ್ಲ! ಇದರಿಂದ ಏನಾದೀತು ಎಂದು ಆತ ಆಲೋಚಿಸತೊಡಗಿದ. ಏನಿದ್ದರೂ ಆತನು ಎಂದೂ ಯಾವ ಸ್ಥಿತಿಯಲ್ಲೂ ಸುಳ್ಳು ಹೇಳಲಾರೆ ಎಂದು ನಿರ್ಧರಿಸಿದ. ಆತ ಮನೆಗೆ ಮರಳಿದ. ಪಾಪಗಳು ಅವನಿಗೆ ಅಭ್ಯಾಸವಾಗಿತ್ತಷ್ಟೇ. ಆತನಿಗೆ ಮದ್ಯ ಸೇವಿಸಲು ಮನಸ್ಸಾಯಿತು. ಮದ್ಯ ತರಲಾಯಿತು. ಲೋಟ ತುಂಬಿಸಲಾಯಿತು. ಆತ ಶರಾಬಿನ ಲೋಟವನ್ನು ಬಾಯಿಗಿಡುವುದರಲ್ಲಿದ್ದ. ಅಷ್ಟರಲ್ಲಿ, ಎಲ್ಲಾದರೂ ವಿದ್ವಾಂಸರು ನನ್ನೊಡನೆ ಕೇಳಿದರೆ ಏನೆಂತ ಉತ್ತರಿಸಲಿ ಎಂಬ ಆಲೋಚನೆ ಅವನ ಮನಸ್ಸಲ್ಲಿ ಉದ್ಭವಿಸಿತು. ಸುಳ್ಳು ಹೇಳುವಂತಿಲ್ಲ ತಾನೇ? ಸತ್ಯ ಹೇಳಿದರೆ ಅವಮಾನ. ಕೊನೆಗೆ ಆತ ಮದ್ಯ ಸೇವಿಸುವ ಇಚ್ಛೆಯನ್ನು ತೊರೆಯಬೇಕಾಯಿತು. ಅದೇ ರೀತಿ ಆತ ಬೇರೆ ಪಾಪ ಕೃತ್ಯಗಳನ್ನು ಎಸಗಲು ಹೊರಟಾಗಲೂ ವಿದ್ವಾಂಸರು ಕೇಳಿದರೆ ಏನು ಉತ್ತರಿಸಬೇಕು ಎಂಬ ಆಲೋಚನೆ ಬರುತ್ತಿತ್ತು ಹಾಗೂ ಸತ್ಯ ಹೇಳಿ ಅವಮಾನಿತನಾಗುವ ದೃಶ್ಯವು ಅವನ ಕಣ್ಣ ಮುಂದೆ ಸುಳಿಯುತ್ತಿತ್ತು. ಹೀಗೆ ಆತ ಕ್ರಮೇಣ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಆ ವ್ಯಕ್ತಿ ಬಳಿಕ ಉತ್ತಮ ವ್ಯಕ್ತಿಯೆಂದು ಕರೆಸಿಕೊಳ್ಳತೊಡಗಿದ. ಇದು ಸತ್ಯ ಹೇಳುವುದರ ಸತ್ಫಲವಾಗಿದೆ.

ಇದೇ ರೀತಿಯ ಇನ್ನೊಂದು ವೃತ್ತಾಂತವನ್ನು ಉಲ್ಲೇಖಿಸಲಾಗುತ್ತಿದೆ. ಓರ್ವ ಹುಡುಗನಿಗೆ ಸದಾ ಸುಳ್ಳು ಹೇಳುವ ಅಭ್ಯಾಸವಿತ್ತು. ಅವನು ಸುಳ್ಳು ಹೇಳಿ ಜನರನ್ನು ಸತಾಯಿಸುತ್ತಿದ್ದ. ಬಳಿಕ ಅವರನ್ನು ತಮಾಷೆ ಮಾಡಿ ನಗುತ್ತಿದ್ದ. ಆತ ನದಿಯಲ್ಲಿ ಸ್ನಾನ ಮಾಡಲು ಹೋದಾಗ ಮುಳುಗಿದಂತೆ ನಟಿಸುತ್ತಿದ್ದ ಮತ್ತು "ಕಾಪಾಡಿ ಕಾಪಾಡಿ..." ಎಂದು ಬೊಬ್ಬೆ ಹೊಡೆಯುತ್ತಾ ಜನರನ್ನು ಕರೆಯುತ್ತಿದ್ದ. ಹತ್ತಿರದ ಜನರು ಅವನ ಬೊಬ್ಬೆ ಕೇಳಿ ತಮ್ಮ ಕೆಲಸವನ್ನೆಲ್ಲ ಬಿಟ್ಟು ಆ ಹುಡುಗನನ್ನು ರಕ್ಷಿಸಲು ಧಾವಿಸಿದಾಗ, ಆತ ಈಜಾಡುತ್ತಾ ದೂರ ಹೋಗುತ್ತಿದ್ದ ಮತ್ತು ಅವರನ್ನು ನೋಡಿ ನಗುತ್ತಿದ್ದ. ಇದು ನಿತ್ಯದ ಪರಿಪಾಠವಾಗಿತ್ತು. ಒಮ್ಮೆ ಆ ಹುಡುಗ ನಿಜವಾಗಿಯೂ ಮುಳುಗತೊಡಗಿದ. ಈ ಬಾರಿ ಆತ ನಿಜವಾಗಿಯೂ ಜನರನ್ನು ಕೂಗಿ ಕರೆದ. "ನಾನು ಮುಳುಗುತ್ತಿದ್ದೇನೆ... ಕಾಪಾಡಿ ಕಾಪಾಡಿ... ನಾನು ಸತ್ತು ಹೋದೇನು..." ಎಂದು ಆಕ್ರಂದನ ಗೈಯತೊಡಗಿದ. ಆದರೆ ಜನರಿಗೆ ಅವನ ಹಿಂದಿನ ಕೃತ್ಯಗಳೆಲ್ಲವೂ ನೆನಪಾಗಿ, ಆತ ಸುಳ್ಳು ಹೇಳುತ್ತಿದ್ದಾನೆ ಎಂದು ಭಾವಿಸಿದರು. ಹಾಗಾಗಿ ಯಾರೂ ಅವನ ಬಗ್ಗೆ ಗಮನ ಹರಿಸಲಿಲ್ಲ. ಕೊನೆಗೆ ಆತ ಮುಳುಗಿ ಸತ್ತು ಹೋದ. ಹೀಗೆ ಸುಳ್ಳು ಹೇಳುವ ಅಭ್ಯಾಸದಿಂದಾಗಿ ಅವನ ಜೀವ ಹೋಯಿತು.

ಸತ್ಯವಂತಿಕೆ ಎಂದರೆ ವ್ಯಕ್ತಿಯು ನಿಜವಾದ ಮಾತನ್ನಾಡಬೇಕು ಮತ್ತು ಒಂದು ಮಾತು ಅಥವಾ ಘಟನೆಯನ್ನು ಇದ್ದುದನ್ನು ಇದ್ದ ಹಾಗೆ ಹೇಳಬೇಕು, ಅದರಲ್ಲಿ ಹೆಚ್ಚು ಕಡಿಮೆ ಮಾಡಬಾರದು. ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಹಲವೆಡೆಗಳಲ್ಲಿ ಸತ್ಯವಂತಿಕೆಯ ಆದೇಶ ನೀಡಿರುವನು,

www.uzanfalah.com

﴿ يَٰٓأَيُّهَا ٱلَّذِينَ ءَامَنُواْ ٱتَّقُواْ ٱللَّهَ وَكُونُواْ مَعَ ٱلصَّٰدِقِينَ ١١٩ ﴾ التوبة: ١١٩

"ಓ ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ ಮತ್ತು ಸತ್ಯಸಂಧರೊಂದಿಗಿರಿ." (ಪವಿತ್ರ ಕುರ್‌ಆನ್: 9: 119)

ಸತ್ಯವಂತಿಕೆಯು ಅಲ್ಲಾಹನೊಡನೆ ಜೋಡಿಕೊಂಡಿದೆ.

﴿ وَمَنْ أَصْدَقُ مِنَ ٱللَّهِ قِيلًا ١٢٢ ﴾ النساء: ١٢٢

"ಮತ್ತು ಅಲ್ಲಾಹನಿಗಿಂತ ಅಧಿಕ ಸತ್ಯವಂತನು ಇನ್ನಾರಿದ್ದಾನೆ?" (ಪವಿತ್ರ ಕುರ್‌ಆನ್: 4: 122)

ಆದ್ದರಿಂದಲೇ ಈ ಗ್ರಂಥವು ಅಂದರೆ ಪವಿತ್ರ ಕುರ್‌ಆನ್ ಪರಮ ಸತ್ಯವಾಗಿದೆ. ಅಲ್ಲಾಹ್ ಹೇಳುತ್ತಾನೆ,

﴿ هَٰذَا مَا وَعَدَنَا ٱللَّهُ وَرَسُولُهُۥ وَصَدَقَ ٱللَّهُ وَرَسُولُهُۥ ٢٢ ﴾ الأحزاب: ٢٢

"ಅಲ್ಲಾಹ್ ಮತ್ತು ಪೈಗಂಬರರು ನಮಗೆ ವಾಗ್ದಾನ ಮಾಡಿದ್ದುದು ಇದನ್ನೇ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮಾತು ನಿಜವಾಗಿತ್ತು." (ಪವಿತ್ರ ಕುರ್‌ಆನ್: 33: 22)

ಸತ್ಯವಂತಿಕೆಯ ಗುಣವು ಪ್ರವಾದಿಗಳ ಚಾರಿತ್ರ್ಯದ ಅವಿಭಾಜ್ಯ ಅಂಗವಾಗಿದೆ. ಅಲ್ಲಾಹನು ಸ್ವತಃ ಪ್ರವಾದಿಗಳ ಕುರಿತು ಅವರ ಸತ್ಯವಂತಿಕೆಯ ಸಾಕ್ಷ್ಯ ನುಡಿದಿರುವನು. ಅಲ್ಲಾಹ್ ಹೇಳುತ್ತಾನೆ,

﴿ وَٱذْكُرْ فِى ٱلْكِتَٰبِ إِبْرَٰهِيمَ ۚ إِنَّهُۥ كَانَ صِدِّيقًا نَّبِيًّا ٤١ ﴾ مريم: ٤١

"ಈ ಗ್ರಂಥದಲ್ಲಿ ಇಬ್ರಾಹೀಮರ ಬಗ್ಗೆ ಪ್ರಸ್ತಾಪಿಸಿರಿ. ನಿಶ್ಚಯವಾಗಿಯೂ ಅವರೊಬ್ಬ ಸತ್ಯಸಂಧರೂ ಪ್ರವಾದಿಯೂ ಆಗಿದ್ದರು." (ಪವಿತ್ರ ಕುರ್‌ಆನ್: 19: 41)

ಪ್ರವಾದಿ ಇಸ್ಮಾಈಲರ(ಅ) ಕುರಿತು ಈ ರೀತಿ ಹೇಳಿರುವನು,

﴿ وَٱذْكُرْ فِى ٱلْكِتَٰبِ إِسْمَٰعِيلَ ۚ إِنَّهُۥ كَانَ صَادِقَ ٱلْوَعْدِ وَكَانَ رَسُولًا نَّبِيًّا ٥٤ ﴾ مريم: ٥٤

"ಈ ಗ್ರಂಥದಲ್ಲಿ ಇಸ್ಮಾಈಲರ ಕುರಿತು ಪ್ರಸ್ತಾಪಿಸಿರಿ. ಅವರು ವಚನಪಾಲಕರಾಗಿದ್ದರು ಮತ್ತು ಸಂದೇಶವಾಹಕ ಹಾಗೂ ಪ್ರವಾದಿ ಆಗಿದ್ದರು." (ಪವಿತ್ರ ಕುರ್‌ಆನ್: 19: 54)

ಅದೇ ರೀತಿ ಪ್ರವಾದಿ ಯೂಸುಫರನ್ನು(ಅ),

﴿ يُوسُفُ أَيُّهَا ٱلصِّدِّيقُ ٤٦ ﴾ يوسف: ٤٦

"ಓ ಸಾಧ್ಯಂತ ಸತ್ಯಸಂಧರಾಗಿರುವವರೇ" (ಪವಿತ್ರ ಕುರ್‌ಆನ್: 12: 46) ಎಂದು ಅಭಿಸಂಬೋಧಿಸುವುದನ್ನು ಉಲ್ಲೇಖಿಸಲಾಗಿದೆ.

ಪ್ರವಾದಿ ಇದ್ರೀಸ್‌ರ(ಅ) ಕುರಿತು ಹೇಳಲಾಯಿತು,

﴿ وَٱذْكُرْ فِى ٱلْكِتَٰبِ إِدْرِيسَ ۚ إِنَّهُۥ كَانَ صِدِّيقًا نَّبِيًّا ٥٦ ﴾ مريم: ٥٦

"ಈ ಗ್ರಂಥದಲ್ಲಿ ಇದ್ರೀಸರ ಕುರಿತು ಪ್ರಸ್ತಾಪಿಸಿರಿ. ಅವರೊಬ್ಬ ಸತ್ಯಸಂಧ ಹಾಗೂ ಓರ್ವ ಪ್ರವಾದಿಯಾಗಿದ್ದರು." (ಪವಿತ್ರ ಕುರ್‌ಆನ್: 19: 56)

www.uzairfalahi.com

ಸ್ವತಃ ಅಂತ್ಯ ಪ್ರವಾದಿ ಮುಹಮ್ಮದ್‌ರನ್ನು(ಸ) ಅವರ ಸಮುದಾಯವು ಪ್ರವಾದಿತ್ವ ಘೋಷಣೆಗೂ ಮುಂಚೆಯೇ ಅಮೀನ್ (ಪ್ರಾಮಾಣಿಕ) ಮತ್ತು ಸಾದಿಕ್ (ಸತ್ಯವಂತ) ಎಂಬ ಬಿರುದಿನಿಂದ ಕರೆಯುತ್ತಿದ್ದರು. ದಿವ್ಯವಾಣಿ ಅವತೀರ್ಣ ಆರಂಭಗೊಂಡಾಗ ಪ್ರವಾದಿವರ್ಯರು(ಸ) ಭೀತಿಗೊಳಗಾಗಿ ಮನೆಗೆ ಮರಳಿದಾಗ, ಅವರನ್ನು ಸಮಾಧಾನಪಡಿಸುತ್ತಾ ಖದೀಜಾ(ರ) ಹೇಳಿದುದೂ ಅದುವೇ ಆಗಿತ್ತು, "ಅಲ್ಲಾಹ್ ನಿಮ್ಮನ್ನು ವ್ಯರ್ಥಗೊಳಿಸಲಾರನು. ಏಕೆಂದರೆ ನೀವು ಸತ್ಯ ನುಡಿಯುವವರು."

ನಿಷ್ಕಾಪಟ್ಯಕ್ಕೆ ಹಲವಾರು ಅವಕಾಶಗಳಿರುತ್ತವೆ. ವಿವಿಧ ಮಗ್ಗುಲುಗಳಲ್ಲಿ ಇದು ಒಳಿತುಗಳ ಸಮಗ್ರ ಗುಣವಾಗಿದೆ. ಅಲ್ಲಾಹನೊಂದಿಗೆ ನಿಷ್ಕಾಪಟ್ಯವು ಇಖ್ಲಾಸ್ ಎನಿಸಿಕೊಳ್ಳುತ್ತದೆ. ಅಂದರೆ ಎಸಗುವ ಕರ್ಮಗಳೆಲ್ಲವೂ ಕೇವಲ ಅಲ್ಲಾಹನಿಗಾಗಿರಬೇಕು. ಅದರಲ್ಲಿ ತೋರಿಕೆ, ಢಂಬಾಚಾರದ ಲವಲೇಶವೂ ಇರಬಾರದು. ಇದುವೇ ಕರ್ಮಗಳಿಗೆ ಸಂಬಂಧಿಸಿ ಅಲ್ಲಾಹನೊಡನೆ ತೋರುವ ನಿಷ್ಕಾಪಟ್ಯವಾಗಿದೆ. ಕರ್ಮಗಳ ಸ್ವೀಕಾರಕ್ಕೂ ಇದು ಪ್ರಥಮ ಶರ್ತವಾಗಿದೆ. ಒಟ್ಟಿನಲ್ಲಿ ನಿಷ್ಕಾಪಟ್ಯವು ಅಲ್ಲಾಹನ ಅನುಸರಣೆಯ ಬುನಾದಿಯಾಗಿದೆ. ಇದು ಕೈತಪ್ಪಿ ಹೋದರೆ, ಎಲ್ಲ ಅನುಸರಣೆಗಳೂ ನಿಷ್ಫಲವಾದಂತೆಯೇ ಸರಿ. ಅದೇ ರೀತಿ ಜನರೊಡನೆ ಸತ್ಯವನ್ನು ನುಡಿಯುವುದೇ ನಿಷ್ಕಾಪಟ್ಯವಾಗಿದೆ. ಅಲ್ಲಾಹನ ಸಂದೇಶವಾಹಕರು(ಸ) ಹೀಗೆಂದಿರುವರು,

«كَبُرَتْ خِيانَةً أنْ تُحدِّثَ أخاكَ حَديثًا هُو لَكَ مُصَدِّقٌ وأنتَ بِهِ كاذبٌ» [أحمد]

"ಅತಿ ದೊಡ್ಡ ಅಪ್ರಾಮಾಣಿಕತೆ ಏನೆಂದರೆ, ವ್ಯಕ್ತಿಯು ತನ್ನ ಸಹೋದರನೊಡನೆ ಏನಾದರೂ ಹೇಳಿದರೆ, ಕೇಳುಗನು ಅದನ್ನು ಸತ್ಯವೆಂದು ಭಾವಿಸುತ್ತಾನೆ ಮತ್ತು ಹೇಳುವವನು ಸುಳ್ಳುಗಾರನಾಗಿರುತ್ತಾನೆ." (ಅಹ್ಮದ್)

ವ್ಯಕ್ತಿಯು ಸ್ವಯಂ ತನ್ನೊಡನೆಯೂ ಸುಳ್ಳು ಹೇಳುತ್ತಾನೆ. ಅದು ಹೇಗೆಂದರೆ, ತನ್ನ ಕುರಿತು ತಿಳಿದೂ ತಿಳಿದೂ ಮೋಸದಲ್ಲಿ ಬಿದ್ದಿರುತ್ತಾನೆ. ತನ್ನಲ್ಲಿ ಇಂತಿಂತಹ ಕೆಡುಕುಗಳಿವೆ ಎಂದು ಅವನಿಗೆ ತಿಳಿದಿರುತ್ತದೆ. ಆದರೆ ಅವುಗಳನ್ನು ಅವನು ಒಪ್ಪಲು ಸಿದ್ಧನಾಗಿರುವುದಿಲ್ಲ ಮತ್ತು ಅವುಗಳನ್ನು ದೂರೀಕರಿಸಲು ಪ್ರಯತ್ನಿಸುವುದೂ ಇಲ್ಲ. ಈ ರೀತಿ ಅವನು ಸ್ವಯಂ ತನ್ನನ್ನು ಮೋಸದಲ್ಲಿರಿಸುತ್ತಾನೆ. ಅಲ್ಲಾಹನ ಸಂದೇಶವಾಹಕರು(ಸ) ಹೀಗೆಂದಿರುವರು,

«دَعْ مَا يَرِيبُكَ إِلَى مَا لاَ يَرِيبُكَ فَإِنَّ الصِّدْقَ طُمَأْنِينَةٌ وَإِنَّ الْكَذِبَ رِيبَةٌ » [ترمذي]

"ಯಾವ ವಸ್ತು ನಿಮ್ಮನ್ನು ಸಂಶಯಕ್ಕೀಡು ಮಾಡುತ್ತದೋ ಅದನ್ನು ತೊರೆಯಿರಿ ಮತ್ತು ನಿಮಗೆ ಯಾವುದರ ಬಗ್ಗೆ ಸಂಶಯ ಇಲ್ಲವೋ ಅದನ್ನು ಅಂಗೀಕರಿಸಿರಿ. ಏಕೆಂದರೆ ಸತ್ಯವು ಸಮಾಧಾನಕ್ಕೆ ಹೇತುವಾಗುತ್ತದೆ ಮತ್ತು ಮಿಥ್ಯವು ಸಂಶಯ, ಅಸಮಾಧಾನಕ್ಕೆ ಕಾರಣವಾಗುತ್ತದೆ." (ತಿರ್ಮಿದಿ)

ಸತ್ಯ ಮತ್ತು ನಿಷ್ಕಾಪಟ್ಯದ ಮಹತ್ವ

ಸತ್ಯಸಂಧತೆ ಮತ್ತು ನಿಷ್ಕಾಪಟ್ಯವು ಎಲ್ಲ ಕಾಲದಲ್ಲೂ ಪ್ರಶಂಸಿತ ಮತ್ತು ಮೆಚ್ಚುಗೆಯ ಗುಣವಾಗಿ ಗುರುತಿಸಲ್ಪಡುತ್ತದೆ. ಅಲ್ಲಾಹನು ಸತ್ಯವಂತರನ್ನು ಬಹಳವಾಗಿ ಹೊಗಳಿದ್ದಾನೆ. ಅವರನ್ನು ಧರ್ಮನಿಷ್ಠರೆಂದು ಕರೆದಿದ್ದಾನೆ. ಅಲ್ಲದೆ ಅವರ ಪ್ರತಿಫಲವು ಸ್ವರ್ಗವಾಗಿದೆ ಎಂದೂ ಹೇಳಿದ್ದಾನೆ.

﴿ أُوْلَٰٓئِكَ ٱلَّذِينَ صَدَقُواْۖ وَأُوْلَٰٓئِكَ هُمُ ٱلۡمُتَّقُونَ ١٧٧ ﴾ البقرة: ١٧٧

"ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು." (ಪವಿತ್ರ ಕುರ್‌ಆನ್: 2: 177)

ಇನ್ನೊಂದೆಡೆ ಹೀಗೆನ್ನಲಾಗಿದೆ,

﴿ قَالَ ٱللَّهُ هَٰذَا يَوْمُ يَنفَعُ ٱلصَّٰدِقِينَ صِدْقُهُمْ ۚ لَهُمْ جَنَّٰتٌ تَجْرِى مِن تَحْتِهَا ٱلْأَنْهَٰرُ خَٰلِدِينَ فِيهَآ أَبَدًا ۚ رَّضِىَ ٱللَّهُ عَنْهُمْ وَرَضُوا۟
عَنْهُ ۚ ذَٰلِكَ ٱلْفَوْزُ ٱلْعَظِيمُ ﴿١١٩﴾ ﴾ المائدة: ١١٩

“ಆಗ ಅಲ್ಲಾಹ್ ಹೇಳುವನು– ಸತ್ಯಸಂಧರಿಗೆ ಅವರ ಸತ್ಯಸಂಧತೆಯು ಫಲ ನೀಡುವ ದಿನವಿದು. ಅವರಿಗಾಗಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಿವೆ. ಇಲ್ಲಿ ಅವರು ಸದಾ ಕಾಲವೂ ವಾಸಿಸುತ್ತಿರುವರು. ಅಲ್ಲಾಹ್ ಅವರಿಂದ ಸಂತುಷ್ಟನಾದನು ಮತ್ತು ಅವರು ಅವನಿಂದ ಸಂತುಷ್ಟರಾದರು. ಇದೇ ಅತ್ಯುತ್ಕೃಷ್ಟ ಯಶಸ್ಸು.” (ಪವಿತ್ರ ಕುರ್‌ಆನ್: 5: 119)

ಸತ್ಯಸಂಧತೆ ಮತ್ತು ನಿಷ್ಕಾಪಟ್ಯವು ಶಾಂತಿ–ಸಮಾಧಾನಕ್ಕೆ ಮೂಲವಾಗಿದೆ. ಇಹಪರಗಳ ಮೋಕ್ಷವು ಇದನ್ನೇ ಅವಲಂಬಿಸಿದೆ. ಅದೇ ವೇಳೆ ಸುಳ್ಳು, ಮೋಸ ಇತ್ಯಾದಿಗಳು ಕ್ಷೋಭೆ ಮತ್ತು ಕೆಡುಕುಗಳ ಬೇರಾಗಿದೆ. ಅಲ್ಲಾಹನ ಸಂದೇಶವಾಹಕರು(ಸ) ಹೇಳಿದ್ದಾರೆ,

«إِنَّ الصِّدْقَ يَهْدِي إِلَى الْبِرِّ وَإِنَّ الْبِرَّ يَهْدِي إِلَى الْجَنَّةِ وَإِنَّ الرَّجُلَ لَيَصْدُقُ حَتَّى يَكُونَ صِدِّيقًا وَإِنَّ الْكَذِبَ يَهْدِي إِلَى الْفُجُورِ وَإِنَّ الْفُجُورَ يَهْدِي إِلَى النَّارِ وَإِنَّ الرَّجُلَ لَيَكْذِبُ حَتَّى يُكْتَبَ عِنْدَ اللهِ كَذَّابًا» [متفق عليه]

“ಸತ್ಯಸಂಧತೆಯು ಒಳಿತಿನೆಡೆಗೆ ಕೊಂಡೊಯ್ಯುತ್ತದೆ ಮತ್ತು ಒಳಿತು ಸ್ವರ್ಗದ ಕಡೆಗೆ. ಓರ್ವ ವ್ಯಕ್ತಿಯು ಸತ್ಯಸಂಧತೆ ಮತ್ತು ನಿಷ್ಕಾಪಟ್ಯವನ್ನು ಪಾಲಿಸಿದರೆ ಅವನು ಅಲ್ಲಾಹನ ಬಳಿ ಸತ್ಯವಂತನೆಂದು ಬರೆಸಿಕೊಳ್ಳುತ್ತಾನೆ. ಅದೇ ರೀತಿ ಸುಳ್ಳು ಪಾಪದೆಡೆಗೆ ಕೊಂಡೊಯ್ಯುತ್ತದೆ ಮತ್ತು ಪಾಪವು ನರಕದ ಕಡೆಗೆ. ಮತ್ತು ನಿರಂತರ ಸುಳ್ಳು ಹೇಳುವವನು ಅಲ್ಲಾಹನ ಬಳಿ ಸುಳ್ಳುಗಾರನೆಂದು ಬರೆಸಲ್ಪಡುತ್ತಾನೆ.” (ಮುತ್ತಫಕ್ ಅಲೈಹಿ)

ನಿಶ್ಚಯವಾಗಿಯೂ ಸತ್ಯಸಂಧತೆಯಲ್ಲಿ ಪ್ರವಾದಿವರ್ಯರು(ಸ) ಸಕಲ ಮಾನವರಿಗೂ ಮಾದರಿಯಾಗಿದ್ದಾರೆ. ನಾವು ಈ ವಿಷಯದಲ್ಲಿಯೂ ಪ್ರವಾದಿವರ್ಯರನ್ನೇ(ಸ) ಅನುಸರಿಸಬೇಕಾಗಿದೆ. ಸತ್ಯಸಂಧತೆಯನ್ನು ನಮ್ಮದಾಗಿಸುವಂತೆಯೇ ಅದನ್ನು ನಮ್ಮ ಹೆಗ್ಗುರುತನ್ನಾಗಿ ಮಾಡಿಕೊಳ್ಳಬೇಕಾಗಿದೆ. ಈ ಗುಣವಿಶೇಷವನ್ನು ಮಿತ್ರರಂತೆಯೇ ಶತ್ರುಗಳೂ ಮೆಚ್ಚುತ್ತಾರೆ.

ಸುಳ್ಳು:

ಸತ್ಯಸಂಧತೆಗೆ ವಿರುದ್ಧವಾಗಿರುವುದು ಮಿಥ್ಯವಾಗಿದೆ. ಅದು ಕಾಪಟ್ಯದ ಲಕ್ಷಣಗಳಲ್ಲಿ ಒಂದಾಗಿದೆ. ಅಲ್ಲಾಹನ ಸಂದೇಶವಾಹಕರು(ಸ) ಹೀಗೆಂದಿದ್ದಾರೆ,

«آيَةُ الْمُنَافِقِ ثَلَاثٌ إِذَا حَدَّثَ كَذَبَ ، وَإِذَا وَعَدَ أَخْلَفَ ، وَإِذَا اؤْتُمِنَ خَانَ» [متفق عليه]

“ಕಪಟವಿಶ್ವಾಸಿಯ ಮೂರು ಲಕ್ಷಣಗಳಿರುತ್ತವೆ. ಮಾತನಾಡುವಾಗ ಸುಳ್ಳು ಹೇಳುವುದು, ವಾಗ್ದಾನ ಮಾಡಿದರೆ ಉಲ್ಲಂಘಿಸುವುದು ಮತ್ತು ವಿಶ್ವಾಸವಿರಿಸಿ ಏನಾದರೂ ಕೊಟ್ಟರೆ ಅದರಲ್ಲಿ ಮೋಸ ಮಾಡುವುದು.” (ಮುತ್ತಫಕ್ ಅಲೈಹಿ)

ಒಟ್ಟಿನಲ್ಲಿ ಓರ್ವ ಸತ್ಯಸಂಧ ಮುಸ್ಲಿಮನು ಸುಳ್ಳು ಹೇಳಲಾರ. ಅಲ್ಲಾಹನ ಸಂದೇಶವಾಹಕರಲ್ಲಿ(ಸ) ಕೇಳಲಾಯಿತು, “ಓರ್ವ ಮುಸ್ಲಿಮನು ಹೇಡಿಯಾಗಬಲ್ಲನೇ?” ಅವರು(ಸ), “ಹೌದು. ಆಗಬಲ್ಲನು” ಎಂದರು. ಮತ್ತೆ ಕೇಳಲಾಯಿತು, “ಜಿಪುಣನಾಗಬಲ್ಲನೇ?” ಪ್ರವಾದಿವರ್ಯರು(ಸ) ಹೌದೆಂದರು. ಮತ್ತೆ ಕೇಳಲಾಯಿತು, “ಸುಳ್ಳುಗಾರನಾಗಬಲ್ಲನೇ?” ಆಗ ಪ್ರವಾದಿವರ್ಯರು(ಸ), “ಇಲ್ಲ. ಖಂಡಿತ ಆಗಲಾರ” ಎಂದರು. (ಮಾಲಿಕ್)

ಸುಳ್ಳಿನ ವಿಶೇಷತೆಯೇನೆಂದರೆ, ಅದು ಸದಾ ಮರೆಯಾಗಿರುವುದಿಲ್ಲ, ಅದು ವ್ಯಕ್ತವಾಗಿಯೇ ತೀರುತ್ತದೆ. ಅಲೀ(ರ) ಹೇಳುತ್ತಾರೆ, “ಒಬ್ಬನು ಒಂದು ವಿಷಯವನ್ನು ಎಷ್ಟೇ ಅಡಗಿಸಿದರೂ ಅವನ ನಾಲಗೆಯ

www.uzarfalahi.com

ನಡುಕ ಮತ್ತು ಮುಖದ ವರ್ಣವು ಅದನ್ನು ವ್ಯಕ್ತಪಡಿಸಿಯೇ ತೀರುತ್ತದೆ.” ಜನರು ಸುಳ್ಳನ್ನೂ ಹಲವು ವಿಧಗಳಾಗಿ ವಿಂಗಡಿಸಿದ್ದಾರೆ. ಹಸಿ ಸುಳ್ಳು, ಒಣ ಸುಳ್ಳು! ಬಹುಶಃ ಸುಳ್ಳು ಕೂಡ ಹಣ್ಣು ತರಕಾರಿಗಳಂತೆ ಒಣಗುತ್ತವೇನೋ! ಅದೇ ರೀತಿ ಸಣ್ಣ ಸುಳ್ಳು, ದೊಡ್ಡ ಸುಳ್ಳು, ಅಗತ್ಯದ ಸುಳ್ಳು, ಅನಗತ್ಯದ ಸುಳ್ಳು ಇತ್ಯಾದಿ... ಆದರೆ ಸುಳ್ಳು ಏನಿದ್ದರೂ ಸುಳ್ಳೇ ಆಗಿರುತ್ತದೆ. ಅದು ಹಸಿಯಾಗಿರಲಿ ಅಥವಾ ಒಣಗಿರಲಿ, ಸಣ್ಣದಿರಲಿ ಅಥವಾ ದೊಡ್ಡದಿರಲಿ, ಅಗತ್ಯದ್ದಿರಲಿ ಅಥವಾ ಅನಗತ್ಯದ್ದಿರಲಿ. ಪ್ರತಿಯೊಂದು ಸುಳ್ಳೂ ಪಾಪವಾಗಿದೆ. ವಿಚಾರಣಾರ್ಹ ಮತ್ತು ದ್ವೇಷಾರ್ಹವಾಗಿದೆ. ಎಲ್ಲದರ ಬಗ್ಗೆಯೂ ವಿಚಾರಣೆ ನಡೆಸಲಾಗುವುದು. ಅಸ್ಮಾ ಬಿಂತಿ ಯಝೀದ್(ರ) ಒಮ್ಮೆ ಅಲ್ಲಾಹನ ಸಂದೇಶವಾಹಕರೊಡನೆ(ಸ) ಕೇಳಿದರು, “ಯಾ ರಸೂಲಲ್ಲಾಹ್! ನಮ್ಮ ಪೈಕಿ ಯಾರಾದರೂ ಮಹಿಳೆಯು ಒಂದು ವಸ್ತುವನ್ನು ಇಷ್ಟ ಪಡುತ್ತಾರೆ. ಆದರೆ ಆಕೆಯೊಡನೆ ಅದು ಬೇಕೇ ಎಂದು ಕೇಳಿದರೆ, ಮುಜುಗರದಿಂದ ನನಗದು ಇಷ್ಟವಿಲ್ಲ ಎಂದು ಹೇಳಿದರೆ ಅದು ಸುಳ್ಳಾಗುವುದೇ?” ಪ್ರವಾದಿವರ್ಯರೆಂದರು(ಸ), “ನಿಶ್ಚಯವಾಗಿಯೂ ಸುಳ್ಳನ್ನು ಸುಳ್ಳೆಂದೇ ಬರೆಯಲಾಗುತ್ತದೆ. ಅದು ಸಣ್ಣದಾದರೂ ಸರಿ.” (ಅಹ್ಮದ್)

ಅಬ್ದುಲ್ಲಾ ಬಿನ್ ಆಮಿರ್(ರ) ವರದಿ ಮಾಡುತ್ತಾರೆ: ಒಮ್ಮೆ ನನ್ನ ತಾಯಿ ನನ್ನನ್ನು ಕರೆದರು. ಆ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ನಮ್ಮ ಮನೆಗೆ ಆಗಮಿಸಿದರು. ಅಮ್ಮ ಹೇಳಿದರು, “ಇಲ್ಲಿ ಬಾ, ನಿನಗೊಂದು ವಸ್ತು ಕೊಡುತ್ತೇನೆ.” ಪ್ರವಾದಿವರ್ಯರು(ಸ) ನನ್ನ ತಾಯಿಯೊಡನೆ ಕೇಳಿದರು, “ನೀನು ಏನನ್ನು ಕೊಡಲು ಅವನನ್ನು ಕರೆದೆ?” ಆಗ ಅಮ್ಮ ಹೇಳಿದರು, “ಖರ್ಜೂರ ನೀಡಲು ಕರೆದಿರುವೆನು.” ಪ್ರವಾದಿವರ್ಯರು(ಸ) ಹೀಗೆ ಪ್ರತಿಕ್ರಿಯಿಸಿದರು, “ಒಂದು ವೇಳೆ ನೀನು ಹಾಗೆ ಕರೆದು ಏನನ್ನೂ ಕೊಡದಿರುತ್ತಿದ್ದರೆ, ನೀನು ಸುಳ್ಳು ಹೇಳಿದೆ ಎಂದು ಬರೆಯಲಾಗುತ್ತಿತ್ತು.” (ಅಬೂ ದಾವೂದ್)

ಸುಳ್ಳು ಹೇಳಬಹುದಾದ ಸಂದರ್ಭಗಳು: ಕೇವಲ ಮೂರು ಸ್ಥಿತಿಯಲ್ಲಿ ಮಾನವನು ಸುಳ್ಳು ಹೇಳಬಹುದಾಗಿದೆ. ಅದಕ್ಕೆ ಅಲ್ಲಾಹನು ಶಿಕ್ಷಿಸುವುದಿಲ್ಲ, ಬದಲಾಗಿ ಅವನಿಗೆ ಪುರಸ್ಕಾರ ನೀಡುವನು. ಆ ಮೂರು ಸ್ಥಿತಿಗಳು ಈ ರೀತಿ ಇವೆ:

1. **ಇಬ್ಬರು ಜಗಳಾಡುತ್ತಿರುವಾಗ ಅವರ ನಡುವೆ ಸಂಧಾನ ನಡೆಸುವ ಸಂದರ್ಭ:** ಇಬ್ಬರು ಸ್ನೇಹಿತರು ಜಗಳಾಡುವ ಸ್ಥಿತಿಗೆ ತಲುಪಿದ ಸಂದರ್ಭದಲ್ಲಿ ಅವರ ನಡುವೆ ಸಂಧಾನ ನಡೆಸಲಿಕ್ಕಾಗಿ ಒಬ್ಬನ ಬಳಿಗೆ ಹೋಗಿ, “ನಿನ್ನ ಸ್ನೇಹಿತನಂತೂ ನಿನ್ನನ್ನು ಪ್ರೀತಿಸುತ್ತಾನೆ ಮತ್ತು ನಿನ್ನ ಬಗ್ಗೆ ಒಳ್ಳೆಯ ಮಾತನ್ನು ಹೇಳುತ್ತಾನೆ; ನಿನ್ನ ಚಾರಿತ್ರ್ಯ ಮತ್ತು ಸನ್ನಡತೆಯನ್ನು ಹೊಗಳುತ್ತಿರುತ್ತಾನೆ” ಎಂದು ಹೇಳುವುದು. ಅದೇ ರೀತಿ ಇನ್ನೊಬ್ಬನ ಬಳಿ ಹೋಗಿಯೂ ಇದೇ ರೀತಿ ಹೇಳುವುದು. ತತ್ಪರಿಣಾಮವಾಗಿ ಅವರ ನಡುವಿನ ದ್ವೇಷವು ಅಳಿದು ಗೆಳೆತನ ಮತ್ತೆ ಚಿಗುರುವುದು ಮತ್ತು ಹೃದಯಗಳೊಳಗಿನ ಕ್ಲೇಶವು ನೀಗುವುದು.

2. **ಮುಸ್ಲಿಮನು ಶತ್ರುಗಳ ಬಂಧನದಲ್ಲಿ ಸಿಲುಕಿದಾಗ** ಮತ್ತು ಶತ್ರುಗಳು ಮುಸ್ಲಿಮರ ರಹಸ್ಯಗಳನ್ನು ಬಹಿರಂಗ ಪಡಿಸಲು ಅವನನ್ನು ವಿವಶಗೊಳಿಸಿದಾಗ, ಅವರಿಗೆ ತಪ್ಪು ಮಾಹಿತಿ ನೀಡುವುದು ಮತ್ತು ಸುಳ್ಳು ಹೇಳಿ ಮುಸ್ಲಿಮರ ಹಿತರಕ್ಷಣೆ ಮಾಡಬಹುದಾಗಿದೆ.

3. **ಕೌಟುಂಬಿಕ ಜೀವನದಲ್ಲಿ ಕೆಲವೊಮ್ಮೆ** ನೇರಾನೇರ ಮಾತು ಹೇಳಿದರೆ ಮನೆಯ ಶಾಂತಿ ಕದಡುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ: ಅಲ್ಲಾಹನು ಎಲ್ಲರನ್ನೂ ಸುಂದರವಾಗಿ ಮಾಡಿರುವುದಿಲ್ಲ. ಎಲ್ಲರೂ ಗೌರವರ್ಣದವರಾಗಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಪತಿಯು ತನ್ನ ಪತ್ನಿಯೊಡನೆ,

www.uzairfalahi.com

ನೀನು ಕುರೂಪಿಯಾಗಿರುವೆ, ಕರ್‍ರಗಿರುವೆ, ನಾನು ನಿನ್ನನ್ನು ಪ್ರೀತಿಸುವುದಿಲ್ಲ ಎಂದು ಹೇಳಿದರೆ? ಈ ರೀತಿ ಸತ್ಯ ನುಡಿಯುವುದರ ಬದಲು ಪತ್ನಿಯನ್ನು ಹೊಗಳಿದರೆ, ಅವಳ ಸೌಂದರ್ಯವನ್ನು ಪ್ರಸ್ತಾಪಿಸದೆ ಆಕೆಯ ಇತರ ಗುಣಗಳನ್ನು ಸುಂದರವಾಗಿ ಬಣ್ಣಿಸಿದರೆ ಮತ್ತು ನಾನು ನಿನ್ನನ್ನು ಬಹಳ ಪ್ರೀತಿಸುತ್ತೇನೆ ಎಂದು ಹೇಳಿದರೆ ದಾಂಪತ್ಯದಲ್ಲಿ ಕಲಹ–ಕ್ಲೇಶ ಬರಲಾರದು. ಅದೇ ರೀತಿ ಪತ್ನಿಯೂ ಪತಿಯೊಡನೆ ವ್ಯವಹರಿಸಿದರೆ, ಅದರಿಂದ ಆಕೆಗೆ ಪ್ರತಿಫಲವಿದೆ.

ಏನಿದ್ದರೂ ಹಾಸ್ಯ ಅಥವಾ ಇನ್ನೊಬ್ಬರ ಪ್ರಶಂಸೆಯಲ್ಲಿಯೂ ಸುಳ್ಳು ಹೇಳಬಾರದು. ಆದ್ದರಿಂದಲೇ ಕಾಪಟ್ಯದಿಂದ ಜನರ ಮುಖ ನೋಡಿ ಸುಳ್ಳು ಪ್ರಶಂಸೆಯನ್ನು ಮಾಡುವ ಜನರಿಂದ ದೂರವಿರಬೇಕೆಂದು ಪ್ರವಾದಿವರ್ಯರು(ಸ) ಕಲಿಸಿಕೊಟ್ಟಿದ್ದಾರೆ.

« إِذَا رَأَيْتُمُ الْمَدَّاحِينَ فَاحْثُوا فِى وُجُوهِهِمُ التُّرَابَ » [مسلم]

“ನಿಮ್ಮ ಮುಖಕ್ಕೆ ಯಾರಾದರೂ ಹೊಗಳಿಕೆಯ ಮಾತನ್ನಾಡಿದರೆ, ಅವರ ಮುಖಕ್ಕೆ ಮಣ್ಣು ಎಸೆದು ಬಿಡಿರಿ.” (ಮುಸ್ಲಿಮ್)

ಅದೇ ರೀತಿ ಕೆಲವರು ಇತರರನ್ನು ಅಪಹಾಸ್ಯಕ್ಕೀಡು ಮಾಡುವುದಕ್ಕಾಗಿಯೇ ಸುಳ್ಳಿನ ಆಶ್ರಯ ಪಡೆಯುತ್ತಾರೆ. ಅಂತಹ ಜನರನ್ನು ಪ್ರವಾದಿವರ್ಯರು(ಸ) ಖಂಡಿಸಿದ್ದಾರೆ ಮತ್ತು ಅಂತಹವರನ್ನು ಶಪಿಸಿದ್ದಾರೆ. “ಸುಳ್ಳು ಹೇಳಿ ಜನರನ್ನು ನಗಿಸುವ ವ್ಯಕ್ತಿಯ ಮೇಲೆ ನಾಶವಿದೆ. ಅಂತಹವನಿಗೆ ನಾಶವಿದೆ. ಅಂತಹವನಿಗೆ ನಾಶವಿದೆ.” (ತಿರ್ಮಿದಿ)

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಹೇಳಿದರು,

«أَنَا زَعِيمٌ بِبَيْتٍ فِى رَبَضِ الْجَنَّةِ لِمَنْ تَرَكَ الْمِرَاءَ وَإِنْ كَانَ مُحِقًّا وَبِبَيْتٍ فِى وَسَطِ الْجَنَّةِ لِمَنْ تَرَكَ الْكَذِبَ وَإِنْ كَانَ مَازِحًا وَبِبَيْتٍ فِى أَعْلَى الْجَنَّةِ لِمَنْ حَسَّنَ خُلُقَهُ» [ابوداؤد]

“ತಾನು ಸತ್ಯದಲ್ಲಿದ್ದರೂ ಜಗಳವನ್ನು ತೊರೆಯುವವನ ಪಾಲಿಗೆ ನಾನು ಸ್ವರ್ಗದಲ್ಲಿ ಒಂದು ಭವನದ ಬಗ್ಗೆ ಜಾಮೀನು ನೀಡುತ್ತೇನೆ. ಹಾಸ್ಯಕ್ಕಾಗಿಯಾದರೂ ಸುಳ್ಳು ಹೇಳದ ವ್ಯಕ್ತಿಯ ಪಾಲಿಗೆ ನಾನು ಸ್ವರ್ಗದಲ್ಲಿ ಒಂದು ಭವನದ ಬಗ್ಗೆ ಜಾಮೀನು ನೀಡುತ್ತೇನೆ. ಅದೇ ರೀತಿ ತನ್ನ ಚಾರಿತ್ರ್ಯವನ್ನು ಸುಧಾರಿಸಿದ ವ್ಯಕ್ತಿಯ ಪಾಲಿಗೆ ಸ್ವರ್ಗದ ಉನ್ನತ ಸ್ಥಾನದಲ್ಲಿ ಒಂದು ಭವನದ ಬಗ್ಗೆ ಜಾಮೀನು ನೀಡುತ್ತೇನೆ.” (ಅಬೂದಾವೂದ್)

ಅಬೂಬಕರ್ ಸಿದ್ದೀಕ್‌ರವರು(ರ) ಯಾರಾದರೂ ತಮ್ಮನ್ನು ಪ್ರಶಂಸಿಸುವುದನ್ನು ಕೇಳಿಸಿಕೊಂಡರೆ ಹೀಗೆನ್ನುತ್ತಿದ್ದರು, “ಓ ಅಲ್ಲಾಹ್! ನನ್ನ ಬಗ್ಗೆ ನನಗಿಂತ ನೀನು ಹೆಚ್ಚು ತಿಳಿದಿರುವೆ ಮತ್ತು ನನ್ನ ಬಗ್ಗೆ ನನ್ನನ್ನು ಹೊಗಳುವವರಿಗಿಂತ ನಾನು ಹೆಚ್ಚು ತಿಳಿದಿರುವೆನು. ಓ ಅಲ್ಲಾಹ್! ಅವರ ಗುಮಾನಿಯನ್ನು ನನ್ನ ಪಾಲಿಗೆ ಒಳಿತನ್ನಾಗಿ ಮಾಡು ಮತ್ತು ಅವರು ತಿಳಿದಿರದಂತಹ ನನ್ನ ಕೊರತೆಗಳನ್ನು ನೀನು ನೀಗಿಸು. ನನ್ನ ಬಗ್ಗೆ ಈ ಜನರು ಹೇಳುತ್ತಿರುವುದರ ಬಗ್ಗೆ ನೀನು ನನ್ನ ವಿಚಾರಣೆ ಮಾಡಬೇಡ.”

* * * * *

www.uzairfalahi.com